ಬೂಕನಕೆರೆ ವಿಜೇಂದ್ರ, ಮೈಸೂರು

ನವ ದಂಪತಿಗಳೇಕೆ ಒಂದು ನಾಯಿಮರಿ ಸಾಕಿಕೊಂಡಿರುತ್ತಾರೆ?



ಪರಸ್ಪರ ಜಗಳವಾದಾಗ ತಮ್ಮ ಬೇಡಿಕೆಗಳ ಮೂಕ ಮೀಡಿಯೇಟರ್ ಆಗಿ ಬಳಸಿಕೊಳ್ಳಲು.

ಆರ್ ಅಪೇಕ್ಷ, ತಿ.ನರಸೀಪುರ

ಬಲಗೈ ಬಂಟ ಎನ್ನುತ್ತಾರೆ. ಎಡಗೈ ಬಂಟ ಎಂದೇಕೆ ಕರೆಯುವುದಿಲ್ಲ?

‘ಬಲಗೈಯವ’ ಎಂದರೆ ‘ಒಳ್ಳೆಯದನ್ನು ಮಾಡುವ’ ಎನ್ನುವುದರ ಚಿಕ್ಕ ರೂಪ ‘ಬಲಗೈ’. ‘ಎಡ’ಕ್ಕೆ ಆ ವಿಸ್ತಾರವಿಲ್ಲ.

ಡಾ. ನಾಗೇಶ್, ಬೆಂಗಳೂರು

ನಾನು ನಿಮ್ಮ ಎಲ್ಲ ಪ್ರಶ್ನೆಗಳನ್ನೂ ಓದುತ್ತೇನೆ. ನನಗೂ ಒಂದು ಬಹುಮಾನ ಕೊಡುವಿರಾ?

ಉತ್ತರಗಳನ್ನೂ ಓದಿ... ಪ್ರಶ್ನೆ ಓದಿದವರಿಗೆ ಉತ್ತರವೇ ಬಹುಮಾನ.

ಅನಸೂಯ ಟಿ, ಕೇದಿಗೆಮನೆ

ಬೆಳಗಿನ ಜಾವ ಎದ್ದರೆ ಒಳ್ಳೆಯದಂತೆ. ಆದರೆ ಆಗಲೇ ನನಗೆ ಗಾಢ ನಿದ್ರೆ ಬರುತ್ತದಲ್ಲಾ...?



ಬೇಕಾದಾಗ ಏಳಿ. ಯಾವಾಗ ಎದ್ದರೂ ವಿಶ್ವದ ಯಾವುದೋ ಸ್ಥಳದಲ್ಲಿ ಬೆಳಗಿನ ಜಾವ ಆಗಿರುತ್ತದೆ.

ನಾಗರಾಜ್ ಮಾದೇಗೌಡ, ಕನಕಪುರ

ಹುಳಿಯುಳ್ಳ ಮಾವು, ನಿಂಬೆ, ನೆಲ್ಲಿಕಾಯಿಯನ್ನು ಬಳಸಿ ಮಾಡಿದ್ದನ್ನು ‘ಉಪ್ಪಿನಕಾಯಿ’ ಎನ್ನುತ್ತೇವೆ. ತಪ್ಪಲ್ವಾ?

ಅವೆಲ್ಲದರ ಕಾಯ ಉಪ್ಪಿನಲ್ಲೇ ಸಂಸ್ಕಾರ ಹೊಂದುವುದರಿಂದ ಉಪ್ಪಿನಕಾಯೆಂಬ ಹೆಸರೇ ರುಚಿಸುತ್ತದೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ನಮ್ಮ ಬದುಕಿಗೆ ‘ಜ್ಞಾನ’ದ ಮಹತ್ವವೆಷ್ಟು?

ಎರಡನೆಯ ಸ್ಥಾನ. ಅಲ್ಪಜ್ಞಾನಿ ಬಾಸ್ ಆಗಿರುತ್ತಾನೆ, ಜ್ಞಾನಿ ಅವನ ಅಸಿಸ್ಟೆಂಟ್.

ಕೊವೆಂಪ್ರ, ಕೊಪ್ಪಲು

ಉತ್ತರಿಸಲೇ ಆಗದ ಪ್ರಶ್ನೆ ಯಾರಾದರೂ ಕೇಳಿದಾಗ ಪ್ರಕಟಿಸುತ್ತೀರಾ?

ಗೊತ್ತಿಲ್ಲ. ಅಂತಹ ಪ್ರಶ್ನೆ ಈವರೆಗೆ ಯಾವುದೂ ಬಂದಿಲ್ಲ.

ಜಗದೀಶ ಬಿ. ಹೊಸೂರು, ಮೈಸೂರು

ಮಗ ತಡವಾಗಿ ಬಂದರೆ ಕಾಯುವ ಮಹಿಳೆ ಗಂಡ ತಡವಾಗಿ ಬಂದರೆ ಕಾಯುವುದಿಲ್ಲ. ಏಕೆ?

ಕಾಯುತ್ತಾಳೆ, ಚೆನ್ನಾಗಿ ಕಾದು ಕೆಂಡ ಆಗಿರುತ್ತಾಳೆ.

ಅಶೋಕ್ ಆರ್. ಹಾಲಣ್ಣವರ, ಲಕ್ಷ್ಮೇಶ್ವರ

ಒಂದು ವೇಳೆ ಸಮುದ್ರದ ನೀರು ಕುಡಿಯಲು ಬರುವಂತಿದ್ದರೆ ಏನಾಗುತ್ತಿತ್ತು ಗುರೂಜೀ?

ಈಗಲೂ ಕುಡಿಯಲು ಬರುತ್ತದಲ್ಲ... ಮೀನು, ತಿಮಿಂಗಿಲ, ಮೊಸಳೆಗಳು ನಲ್ಲಿ ಹುಡುಕಿ ಬರುವುದಿಲ್ಲ.

ರವಿ ಕಂಗಳ, ಬಾದಾಮಿ

‘ಹಿರಿಯರಿದ್ದಾಗಲೂ ಕಿರಿಯರಿಗೆ ಅಧಿಕಾರ ನೀಡುವುದು ಸರಿಯೆ?’ ಎನ್ನುವುದೇಕೆ?

ಅರ್ಹತೆಗಿಂತ ಆಯಸ್ಸು ಶ್ರೇಷ್ಠ ಎಂಬ ತಪ್ಪು ಕಲ್ಪನೆಯ ಪ್ರಭಾವ.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

ಮಕ್ಕಳ ಹೆಸರ ಮುಂದೆ ತಂದೆಯ ಹೆಸರೇ ಹಾಕಿರುತ್ತಾರೆ. ಏಕೆ?

ಬದುಕಿನ ಯಾವುದೇ ವ್ಯವಹಾರಕ್ಕೆ ಒಂದು ಬಿಲ್ಲಿಂಗ್ ಅಡ್ರೆಸ್ ಇರಬೇಕಾದ್ದರಿಂದ.

ಎಚ್.ಆರ್. ವಸ್ತ್ರದ, ಧಾರವಾಡ

ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ಪೀಡಿಸಿದವರು ಬೊಮ್ಮಾಯಿಯೊಂದಿಗೆ ಹೇಗೆ ನಡೆದುಕೊಳ್ಳಬಹುದು?

ಅವರಿಗೆ ತಾರತಮ್ಯ, ವಿವೇಕ ಇರುವುದಿಲ್ಲ.

ರತ್ನಜ, ಮೈಸೂರು

ನಿಜವಾದ ಸುಖಕ್ಕಿಂತ ಸುಖದ ಕಲ್ಪನೆಯಲ್ಲೇ ಹೆಚ್ಚು ಸುಖ ಇದೆಯಂತೆ. ಹೌದಾ?

ಮದುವೆಯಾದ ಎಲ್ಲರೂ ಹೀಗೇ ಹೇಳುತ್ತಾರೆ.

## ವಾರದ ಪ್ರಶ್ನೆ

ಶಿವಸ್ವಾಮಿ ನೇನೆಕಟ್ಟೆ, ಬೆಂಗಳೂರು

ಅಂತಿಮವಾಗಿ ಆರಡಿ ಮೂರಡಿಯೇ ಗಟ್ಟಿ ಎಂದು ಗೊತ್ತಿದ್ದೂ ಭೂಮಂಡಲವನ್ನೇ ಬಯಸಿ ಹಲುಬುವುದೇಕೆ?

ಯಾರನ್ನೇ ತಬ್ಬುವುದಕ್ಕೆ ಮುನ್ನ ಅಷ್ಟಗಲಕ್ಕೂ ಕೈ ವಿಸ್ತರಿಸುವುದು ಸಹಜ ಗುಣ.

ಹೆಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ

ಕೊರೊನಾದಲ್ಲಿ ಎಷ್ಟು ಅಲೆಗಳಿವೆ ಗುರುಗಳೆ?

ಬೇಜವಾಬ್ದಾರಿ, ಬೇಹುಷಾರಿ ಜನರು ಅವಕಾಶ ಮಾಡಿಕೊಟ್ಟಷ್ಟು.

ಕೆ. ಹರಿಪ್ರಸಾದ್ ಸಗ್ರಿ, ಕುಂಜಿಬೆಟ್ಟು

ಕೆಲವೊಮ್ಮೆ ಈ ಪ್ರಪಂಚದಲ್ಲಿ ಆಗುತ್ತಿರುವ ಘಟನೆಗಳು ಆಗಲೇ ಆಗಿಹೋಗಿವೆ ಎಂಬ ಅನುಭವಕ್ಕೆ ಬರುತ್ತವಲ್ಲಾ?

ಅದೇ ಪ್ರಕೃತಿ, ಅದೇ ವಿಕೃತಿ ಇರುವವರೆಗೆ ಎಲ್ಲ ಘಟನೆಗಳೂ ಆಕ್ಷನ್ ರೀಪ್ಲೇಗಳೇ.

ನಾಗೇಶ್ ಮೈಸೂರು, ಸಿಂಗಾಪುರ

ಮನೆಯ ಆರು ದೋಸೆ ತಿಂದರೂ ಬರದ ತೇಗು ಹೋಟೆಲಿನ ಒಂದು ದೋಸೆಗೇ ಬರುವುದಲ್ಲಾ...?



ಹೋಟೆಲ್ ದೋಸೆಗೆ ಕಿರಿದರಲ್ಲೇ ಹಿರಿ ಅನರ್ಥವನ್ನು ನೀಡುವ ತಾಕತ್ತಿರುತ್ತದೆ.

ರಮಾನಂದರೆಡ್ಡಿ, ಮದಕರಿಪುರ

ಬಣ್ಣಬಣ್ಣದ ಕನಸು ಕಾಣಲು ಕೂಲಿಂಗ್ ಕನ್ನಡಕ ಹಾಕಿಕೊಳ್ಳಬೇಕೆ?

ಸ್ಕೂಲಿಂಗ್ ಕನ್ನಡಕ ಹಾಕಿಕೊಳ್ಳಬೇಕು. ಕಲ್ಪನೆಗಳ ಕಾಮನಬಿಲ್ಲಿಗೆ ಕಲಿಕೆಯೇ ಪ್ರೇರಕ, ಪೂರಕ.

ಹರಿತಸ, ಬೆಂಗಳೂರು

ಉದಾಸೀನಕ್ಕೂ ಉಪೇಕ್ಷೆಗೂ ಇರುವ ವ್ಯತ್ಯಾಸವೇನು?

ಉಪೇಕ್ಷೆ ಛಲವಾದಿಗೆ ಟಾನಿಕ್; ಉದಾಸೀನ ಅಹಂಕಾರಕ್ಕೆ ಮದ್ದು.

■ ರಾಮ್

ಪ್ರಶ್ನೆ ಕಳಿಸಲು: editorsu@sudha.co.in